ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ. 571/2025**

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಎಸ್. ಪರಶುರಾಮ್ | ಪಿ.ಡಬ್ಲ್ಯೂ-2 |
| ತಂದೆಯ ಹೆಸರು | ಲೇ. ಸಣ್ಣಪ್ಪ | |
| ವಯಸ್ಸು | 55 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಎ.ಎಸ್.ಐ. ಸಾಗರ ಪೇಟೆ ಠಾಣೆ | ದಿನಾಂಕಃ |
| ವಾಸಃ | ಸಾಗರ | 19.11.2025 |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರ ಅಡಿಯಲ್ಲಿ ಮುಖ್ಯ ವಿಚಾರಣೆ ವಿ.ಸಿ ಮುಖಾಂತರ:- ಎಪಿಪಿ ರವರಿಂದ-**

ನಾನು ಸಾಗರ ಪೇಟೆ ಪೊಲೀಸ್ ಠಾಣೆಯಲ್ಲಿ 01.08.2022 ರಿಂದ ಇಲ್ಲಿಯವರೆಗೆ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯವು ಆರೋಪಿತರು ವಿರುದ್ಧ ಉದ್ಘೋಷಣಾ ವಾರೆಂಟ್ ಅನ್ನು ಹೊರಡಿಸಿತ್ತು. ಸದರಿ ವಾರೆಂಟ್ ಅನ್ನು ಪಡೆದು ನಾನು ದಿಃ **05.06.2025** ಆರೋಪಿತರು ಕೊನೆಯ ಬಾರಿಗೆ ವಾಸ ಮಾಡುತ್ತಿದ್ದ ವಿಳಾಸಗಳಿಗೆ ಹೋಗಿ ಆರೋಪಿತನ ಬಗ್ಗೆ ವಿಚಾರಿಸಲಾಗಿ ಯಾವುದೇ ಮಾಹಿತಿ ದೊರೆಯದ ಕಾರಣ ಉದ್ಘೋಷಣಾ ವಾರೆಂಟ್ ಅನ್ನು ನಿಯಮಾನುಸಾರ ಜಾರಿಗೊಳಿಸಿ, ಸದರಿ ಉದ್ಘೋಷಣೆಯ ಒಂದು ಪ್ರತಿಯನ್ನು ಸಾರ್ವಜನಿಕರಿಗೆ ಗೋಚರವಾಗುವ ಸ್ಥಳದಲ್ಲಿ ಅಂಟಿಸಿ ಪೊಟೋ ತೆಗೆದಿರುತ್ತೇನೆ. ಅದೇ ರೀತಿ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ನ್ಯಾಯಾಲಯದ ನೋಟೀಸ್ ಬೋರ್ಡ್ ನಲ್ಲಿ ಉದ್ಘೋಷಣಾ ವಾರೆಂಟ್ ಅನ್ನು ಅಂಟಿಸಿರುತ್ತೇನೆ. ಅದೇ ರೀತಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಆರೋಪಿತರ ಹೆಸರಿನಲ್ಲಿ ಆಸ್ತಿಗಳ ಕುರಿತು ನಿವೇದನೆಯನ್ನು ಸಲ್ಲಿಸಿದ್ದು, ಸಂಬಂಧಪಟ್ಟ ಅಧಿಕಾರಿಗಳು ಆರೋಪಿತರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದು ವರದಿಗಳನ್ನು ಸಲ್ಲಿಸಿರುತ್ತಾರೆ.

ನಿವೇದನೆಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು, ಉದ್ಘೋಷಣಾ ಸ್ಥಳ ಪಂಚನಾಮೆಯನ್ನು ನಿಪಿ-8 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-8(ಎ) ಎಂದು, ಆಯುಕ್ತಕರಿಗೆ ಬರೆದ ನಿವೇದನೆಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-

9(ಎ) ಎಂದು, ಎರಡು ಫೋಟೋಗಳನ್ನು ಒಟ್ಟಾಗಿ ನಿಪಿ-10 ಎಂದು, ನಿವೇದನೆಯನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು, ಉದ್ಘೋಷಣಾ ಸ್ಥಳ ಪಂಚನಾಮೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-12(ಎ) ಎಂದು, ಆಯುಕ್ತಕರಿಗೆ ಬರೆದ ನಿವೇದನೆಯನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು, ಎರಡು ಫೋಟೋಗಳನ್ನು ಒಟ್ಟಾಗಿ ನಿಪಿ-14 ಎಂದು, ಎರಡು ಹಿಂಬರಹಗಳನ್ನು ನಿಪಿ-15 ಮತ್ತು ನಿಪಿ-16 ಎಂದು ಗುರುತಿಸಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.